ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4127

ಸದಸ್ಯರ ಹೆಸರು : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಉತ್ತರಿಸುವ ಸಚಿವರು : ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು, (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ವಿದ್ಯುತ್ ಸಂಪರ್ಕವಿರದ ಹಳ್ಳಿಗಳು ಎಷ್ಟಿವೆ; (ತಾಲ್ಲೂಕುವಾರು ವಿವರ ನೀಡುವುದು)	ಅ) 2001ರ ಜನಗಣತಿ ಪ್ರಕಾರ ರಾಜ್ಯದಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿಗಳ (ಕಂದಾಯ ಗ್ರಾಮಗಳು) ಒಟ್ಟು ಸಂಖ್ಯೆ 150. ತಾಲ್ಲೂಕುವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ. ಅಲ್ಲದೇ 1991ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 28,178 ಉಪಗ್ರಾಮಗಳಿದ್ದು, ಇವುಗಳ ಪೈಕಿ 12,010 ಉಪ ಗ್ರಾಮಗಳು ವಿದ್ಯುದೀಕರಣಗೊಂಡಿದ್ದು, 16,168 ಉಪಗ್ರಾಮಗಳು ವಿದ್ಯುದೀ ಕರಣಕ್ಕಾಗಿ ಬಾಕಿ ಉಳಿದಿವೆ. ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.
ಆ	ಇವುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು);	ಅ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ 116 ಮತ್ತು ಮಂಗಳೂರು ವಿದ್ಯುತ್ ಸರಬ ರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ 12 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಆಯಾ ಕಂಪನಿಗಳು ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದು, ಕೇಂದ್ರ ಸರ್ಕಾರವು ನೂತನ ವಾಗಿ ಜಾರಿಗೊಳಿಸಿರುವ

		ರಾಜೀವಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಯಲ್ಲಿ ಹಂತಹಂತವಾಗಿ ವಿದ್ಯುದೀಕರಣ ಗೊಳಿಸಲು ಪ್ರಸ್ತಾವನೆಗಳನ್ನು ಸಿದ್ಧಪಡಿಸ ಲಾಗುತ್ತಿದೆ. ಹುಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ವಿದ್ಯುದ್ಧೀಕರಣಕ್ಕಾಗಿ ಬಾಕಿ ಉಳಿದಿರುವ 22 ಗ್ರಾಮಗಳು ದಟ್ಟವಾದ ಅರಣ್ಯ ಪ್ರದೇಶದಲ್ಲಿ ಇರುವುದರಿಂದ ಅವು ಗಳನ್ನು ಸಾಂಪ್ರಾದಾಯಿಕ ವಿಧಾನದಿಂದ ವಿದ್ಯುದೀಕರಣ ಮಾಡುವುದು ಕಷ್ಟಕರವಾಗಿರು ತ್ತದೆ. ಆದುದರಿಂದ ಈ ಹಳ್ಳಿಗಳನ್ನು ಅಸಂಪ್ರದಾಯ ಶಕ್ತಿ ಮೂಲದ ವಿಧಾನದಿಂದ ವಿದ್ಯುದೀಕರಿಸಲು ಉದ್ದೇಶಿಸಿದೆ. ಈ ಹಳ್ಳಿಗಳ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ವಿದ್ಯುತ್ ಅಭಿವೃದ್ಧಿ ಸಂಸ್ಥೆಗೆ (ಕೆ.ಆರ್.ಇ.ಡಿ.ಎಲ್) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ನೀಡಿರುತ್ತದೆ. ಅಸಂಪ್ರದಾಯಕ ಶಕ್ತಿ ಮೂಲದ ಮೂಲಕ ವಿದ್ಯುದೀಕರಣ ಕಾರ್ಯವನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಇ.ಡಿ.ಎಲ್) ಸಂಸ್ಥೆಯು ಖಾನಾಪುರ ತಾಲ್ಲೂಕು ಹೊರತು ಪಡಿಸಿ ಉಳಿದ ಮೂರು ತಾಲ್ಲೂಕುಗಳಲ್ಲಿ ವಿದ್ಯುದ್ಧೀಕರಣ ಹೊಂದದಿರುವ ಹಳ್ಳಿಗಳನ್ನು ನವೀಕರಿಸ್ಬಹುದಾದ ಇಂಧನ ಮೂಲಗಳಿಂದ ವಿದ್ಯುದ್ಧೀಕರಣಗೊಳಿಸಲು ಅಸಂಪ್ರದಾಯಕ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿ ಇವರಿಂದ ದೊರೆಯುವ ಶೇ. 90ರಷ್ಟು ಸಹಾಯಧನವನ್ನು ಪಡೆಯುವ ನಿಟ್ಟಿನಲ್ಲಿ ಈಗಾಗಲೇ ಪ್ರಸ್ತಾವನೆಯನ್ನು ಅವರಿಗೆ ಕಳುಹಿಸಲಾಗಿದೆ. ಅವರಿಂದ ಅನುಮತಿ ದೊರಕಿದ ಕೂಡಲೇ ಬಾಕಿ ಉಳಿದ ಶೇ. 10ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸಿ ಹಳ್ಳಿಗಳನ್ನು

		ವಿದ್ಯುದ್ಧೀಕರಣ ಗೊಳಿಸಲಾಗು ವುದು. ಖಾನಾಪುರ ತಾಲ್ಲೂಕಿನಲ್ಲಿ ಬರುವ ವಿದ್ಯುದ್ಧೀಕರಣಗೊಳ್ಳುವ ಹಳ್ಳಿಗಳನ್ನು ಸಹ 2005–06ನೇ ಸಾಲಿನಲ್ಲಿ ಅಸಂಪ್ರದಾಯಕ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರ ಗ್ರಾಮೀಣ ವಿದ್ಯುದ್ಧೀ ಕರಣ ಯೋಜನೆಯಡಿಯಲ್ಲಿ ವಿದ್ಯುದ್ಧೀ ಕರಣ ಗೊಳಿಸಲು ಅವರಿಂದ ಅನುಮತಿಯನ್ನು ಕೋರಲಾಗಿದೆ. ಅನುಮತಿ ದೊರೆತ ನಂತರ ಅವುಗಳನ್ನು ಸಹಾ ವಿದ್ಯುದ್ಧಿಕರಣಗೊಳಿಸಲು ಕೈಗೆತ್ತಿಕೊಳ್ಳಲಾಗುವುದು. ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿರುವ ಉಪ ಗ್ರಾಮಗಳನ್ನೂ ಸಹ ಕೇಂದ್ರ ಸರ್ಕಾರದ ರಾಜೀವಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಹಂತಹಂತವಾಗಿ ಕೈಗೊಳ್ಳಲು ವಿದ್ಯುತ್ ಸರಬರಾಜು ಕಂಪನಿಗಳು ಪ್ರಸ್ತಾವನೆಗಳನ್ನು ಗ್ರಾಮೀಣ ವಿದ್ಯುದೀಕರಣ ನಿಗಮದ ಮಂಜೂರಾತಿಗಾಗಿ ಸಲ್ಲಿಸಲು ಕ್ರಮ ಗಳನ್ನು ತೆಗೆದುಕೊಳ್ಳುತ್ತಿವೆ. ಕೇಂದ್ರ ಸರ್ಕಾರದ ಅಸಂಪ್ರದಾಯ ಇಂಧಿನ ಮೂಲಗಳ ಮಂತ್ರಾಲಯದ ಸಹಯೋಗ ದಿಂದ, 2005–06ರ ವರ್ಷದಲ್ಲಿ 1000 ಉಪಗ್ರಾಮಗಳನ್ನು ವಿದ್ಯುದೀಕರಣಗೊಳಿಸುವ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ಹಮ್ಮಿಕೊಂಡಿರುತ್ತದೆ.

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4127 ಕ್ಕೆ ಅನುಬಂಧ-1

ರಾಜ್ಯದಲ್ಲಿ 2001ರ ಜನಗಣತಿಯ ಪ್ರಕಾರ ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುವ ಹಳ್ಳಿಗಳ (ಕಂದಾಯ ಗ್ರಾಮಗಳು) ವಿವರ

ಅ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿ
1.	ಬೆಂಗಳೂರು ಗ್ರಾಮಾಂತರ	ಕನಕಪುರ	ವೀರಸಂದ್ರ
2.	ಬೆಂಗಳೂರು	ಕನಕಪುರ	ಎರ
3.	ಕೋಲಾರ	ಕೋಲಾರ	ವೆಂಕಟಪುರ
4.	ಕೋಲಾರ	ಕೋಲಾರ	ಚರಲದಿನ್ನೆ
5.	ಕೋಲಾರ	ಚಿಂತಾಮಣಿ	ಕರ್ಕಲಚಿಂತೆ
6.	ಕೋಲಾರ	ಚಿಂತಾಮಣಿ	ಕುಕ್ಕಲದಿನ್ನೆ
7.	ಕೋಲಾರ	ಚಿಂತಾಮಣಿ	ಅಮಾನಿ ತಿಮ್ಮಸಾನಿಕೆರೆ
8.	ಕೋಲಾರ	ಚಿಂತಾಮಣಿ	ಕರಿಜಂಗಲ ಹಳ್ಳಿ
9.	ಕೋಲಾರ	ಚಿಂತಾಮಣಿ	ನಂದನ ಹೊಸಹಳ್ಳಿ
10.	ಕೋಲಾರ	ಚಿಂತಾಮಣಿ	ಪೋಟ್ಟರಲ ಹಳ್ಳಿ
11.	ಕೋಲಾರ	ಶ್ರೀನಿವಾಸಪುರ	ಪೋಟ್ಟಿಪಳ್ಳೀ
12.	ಕೋಲಾರ	ಶ್ರೀನಿವಾಸಪುರ	ಸಟ್ಟಿವರಿಪಳ್ಳಿ
13.	ಕೋಲಾರ	ಶ್ರೀನಿವಾಸಪುರ	ಅಗ್ರಹಾರ
14.	ಕೋಲಾರ	ಶ್ರೀನಿವಾಸಪುರ	ಅಮಾನಿ ನರಸಿಂಹ ನಾಯಕನಕೆರೆ
15.	ಕೋಲಾರ	ಶ್ರೀನಿವಾಸಪುರ	ಜಲಗುದ್ಲಪಳ್ಳಿ
16.	ಕೋಲಾರ	ಶ್ರೀನಿವಾಸಪುರ	ಮರೇಲಪಳ್ಳಿ
17.	ಕೋಲಾರ	ಶ್ರೀನಿವಾಸಪುರ	ಅಂಗರಕುಂಟೆ
18.	ಕೋಲಾರ	ಶ್ರೀನಿವಾಸಪುರ	ಜಂಗಮಸೆಟ್ಟ ಪಳ್ಳಿ
19.	ಕೋಲಾರ	ಶ್ರೀನಿವಾಸಪುರ	ಗಮ್ಮೇಪಳ್ಳಿ

20.	ಕೋಲಾರ	ಶ್ರೀನಿವಾಸಪುರ	ಬೊಡ್ಡರ ಗುಲದಿನ್ನೆ
21.	ಕೋಲಾರ	ಶ್ರೀನಿವಾಸಪುರ	ಅಪ್ಪರಸಾನೆಹಳ್ಳಿ
22.	ಕೋಲಾರ	ಶ್ರೀನಿವಾಸಪುರ	ಸುಣ್ಣಗುಟ್ಟಪಳ್ಳಿ
23.	ಕೋಲಾರ	ಶ್ರೀನಿವಾಸಪುರ	ನರಸಿಂಹಪುರ
24.	ಕೋಲಾರ	ಶ್ರೀನಿವಾಸಪುರ	ನಲ್ಲಪಳ್ಳಿ
25.	ಕೋಲಾರ	ಶ್ರೀನಿವಾಸಪುರ	ಸಿದ್ದನಹಳ್ಳಿ
26.	ಕೋಲಾರ	ಶ್ರೀನಿವಾಸಪುರ	ಚಿಕ್ಕಪುರ
27.	ಕೋಲಾರ	ಶ್ರೀನಿವಾಸಪುರ	ವಾಯುರಗರಿಹಳ್ಳಿ
28.	ಕೋಲಾರ	ಶ್ರೀನಿವಾಸಪುರ	ಜೋಗರುಂಟೆ
29.	ಕೋಲಾರ	ಶ್ರೀನಿವಾಸಪುರ	ಅಡವಿಕುರಪಳ್ಳಿ
30.	ಕೋಲಾರ	ಶ್ರೀನಿವಾಸಪುರ	ಪಿಂಡಗನಗರ
31.	ತುಮಕೂರು	ತುಮಕೂರು	ಬೇಳ್ಳಾವಿ ಅಮನಿಕೆರೆ
32.	ತುಮಕೂರು	ತುಮಕೂರು	ಈಚಲಕುಂಟೆ
33.	ತುಮಕೂರು	ತುಮಕೂರು	ಸಂಗಲಪುರ
34.	ತುಮಕೂರು	ತುಮಕೂರು	ಗುಳೂರು ಅಮನಿಕೆರೆ
35.	ತುಮಕೂರು	ತುಮಕೂರು	ಹೊನ್ನುಡಿಕೆ
36.	ತುಮಕೂರು	ತುಮಕೂರು	ವೋರನಾಯಕನಹಳ್ಳಿ
37.	ತುಮಕೂರು	ತುಮಕೂರು	ಗಂಧಮಾಚನಹಳ್ಳಿ
38.	ತುಮಕೂರು	ತುಮಕೂರು	ಅರೇಹಳ್ಳಿ
39.	ತುಮಕೂರು	ತುಮಕೂರು	ಚೋಲಂಬಳ್ಳಿ
40.	ತುಮಕೂರು	ತುಮಕೂರು	ಕೊಟ್ಟಿಗೆಗೋಲ್ಲಹಳ್ಳಿ
41.	ತುಮಕೂರು	ಕುಣಿಗಲ್	ಲಕ್ಕಶೆಟ್ಟಿಪುರ
42.	ತುಮಕೂರು	ಕುಣಿಗಲ್	ಗಂಗಪುರ
43.	ತುಮಕೂರು	ಗುಬ್ಬಿ	ಕಲಿಂಗನಹಳ್ಳಿ
44.	ತುಮಕೂರು	ಗುಬ್ಬಿ	ಚೆತನಹಳ್ಳಿ
45.	ತುಮಕೂರು	ಗುಬ್ಬಿ	ನಾಯಕನಹಳ್ಳಿ
46.	ತುಮಕೂರು	ಗುಬ್ಬಿ	ರಂಗಪುರ ಎಮ್.
47.	ತುಮಕೂರು	ಗುಬ್ಬಿ	ಉಂಗಪುರ ಜಿ.
48.	ತುಮಕೂರು	ಗುಬ್ಬಿ	ನಾಯಕನಕೆರೆ

49.	ತುಮಕೂರು	ಗುಬ್ಬಿ	ಮಲ್ಲಸಚಿದರ್ ಕಟ್ಟೆ
50.	ತುಮಕೂರು	ಗುಬ್ಬಿ	ಮರಹಳ್ಳದವಕವಲ್
51.	ತುಮಕೂರು	ಚಿಕ್ಕನಾಯಕನಹಳ್ಳಿ	ಬಾಲೇಕೋನ
52.	ತುಮಕೂರು	ಚಿಕ್ಕನಾಯಕನಹಳ್ಳಿ	ಪುರಷೇನ ಹಳ್ಳಿ
53.	ತುಮಕೂರು	ಚಿಕ್ಕನಾಯಕನಹಳ್ಳಿ	ಹರೂಗೋಂನಡನಹಳ್ಳಿ
54.	ತುಮಕೂರು	ಚಿಕ್ಕನಾಯಕನಹಳ್ಳಿ	ಅಕ್ಕನಹಳ್ಳಿ
55.	ತುಮಕೂರು	ಚಿಕ್ಕನಾಯಕನಹಳ್ಳಿ	ಘಮ್ಮಲಾಪುರ
56.	ತುಮಕೂರು	ಚಿಕ್ಕನಾಯಕನಹಳ್ಳಿ	ಕಲೇನ ಹಳ್ಳಿ
57.	ತುಮಕೂರು	ಚಿಕ್ಕನಾಯಕನಹಳ್ಳಿ	ಚಾಸಿಹಳ್ಳಿ
58.	ತುಮಕೂರು	ಚಿಕ್ಕನಾಯಕನಹಳ್ಳಿ	ಬಗಾಯತ್ತು
59.	ತುಮಕೂರು	ಚಿಕ್ಕನಾಯಕನಹಳ್ಳಿ	ಚನ್ನೇನಹಳ್ಳಿ
60.	ತುಮಕೂರು	ಚಿಕ್ಕನಾಯಕನಹಳ್ಳಿ	ಬ್ಯಾಟೆರಂಗನಹಳ್ಳಿ
61.	ತುಮಕೂರು	ಚಿಕ್ಕನಾಯಕನಹಳ್ಳಿ	ಪೇಮಲದೇವರಹಳ್ಳಿ
62.	ತುಮಕೂರು	ಚಿಕ್ಕನಾಯಕನಹಳ್ಳಿ	ಕೃಷ್ಣಸಾಗರ್ ಕೇರೆ
63.	ತುಮಕೂರು	ತಿಪಟೂರು	ಕಬಳ್ಳಿ ಕಾವಲ್
64.	ತುಮಕೂರು	ಶಿರಾ	ಕಂಬದಹಳ್ಳಿ
65.	ತುಮಕೂರು	ಶಿರಾ	ಬಸವನಹಳ್ಳಿ
66.	ತುಮಕೂರು	ಶಿರಾ	ಕಪೇನಹಳ್ಳಿ
67.	ಚಿತ್ರದುರ್ಗ	ಚಿತ್ರದುರ್ಗ	ಹೊರಕೇನಹಳ್ಳಿ
68.	ಚಿತ್ರದುರ್ಗ	ಚಿತ್ರದುರ್ಗ	ಹುಳಿಗೇರಿ
69.	ಚಿತ್ರದುರ್ಗ	ಚಿತ್ರದುರ್ಗ	ಚಿಕ್ಕಬೀರಿಗಿ
70.	ಚಿತ್ರದುರ್ಗ	ಚಿತ್ರದುರ್ಗ	ಮುದ್ದಪುರ
71.	ಚಿತ್ರದುರ್ಗ	ಚಿತ್ರದುರ್ಗ	ಚಿಪ್ಪನಕೇರೆ
72.	ಚಿತ್ರದುರ್ಗ	ಚಿತ್ರದುರ್ಗ	ಚಿಕ್ಕಗೊಂಡನಹಳ್ಳಿ
73.	ಚಿತ್ರದುರ್ಗ	ಚಿತ್ರದುರ್ಗ	ಮಾದನಾಯಕನಹಳ್ಳಿ
74.	ಚಿತ್ರದುರ್ಗ	ಚಿತ್ರದುರ್ಗ	ಚಿಕ್ಕಪನಹಳ್ಳಿ
75.	ಚಿತ್ರದುರ್ಗ	ಚಿತ್ರದುರ್ಗ	ಸೂರೇನಹಳ್ಳಿ
76.	ಚಿತ್ರದುರ್ಗ	ಚಿತ್ರದುರ್ಗ	ಸುಲ್ತನಿಪುರ
77.	ಚಿತ್ರದುರ್ಗ	ಚಿತ್ರದುರ್ಗ	ಸಿದವನದುರ್ಗ

78.	ಚಿತ್ರದುರ್ಗ	ಚಿತ್ರದುರ್ಗ	ಏಮಘಟ್ಟ
79.	ಚಿತ್ರದುರ್ಗ	ಚಿತ್ರದುರ್ಗ	ಪಪೇನಹಳ್ಳಿ
80.	ಚಿತ್ರದುರ್ಗ	ಚಿತ್ರದುರ್ಗ	ರಾಯನಹಳ್ಳಿ
81.	ಚಿತ್ರದುರ್ಗ	ಚಿತ್ರದುರ್ಗ	ಬೇಲಘಟ್ಟ
82.	ಚಿತ್ರದುರ್ಗ	ಚಿತ್ರದುರ್ಗ	ವೀರಮದಕರಿಪುರ
83.	ಚಿತ್ರದುರ್ಗ	ಚಿತ್ರದುರ್ಗ	ಪೇಲೂರುಹಟ್ಟಿ
84.	ಚಿತ್ರದುರ್ಗ	ಚಿತ್ರದುರ್ಗ	ಸಿದ್ಧವನಹಳ್ಳಿ
85.	ಚಿತ್ರದುರ್ಗ	ಚಿತ್ರದುರ್ಗ	ಚ್ಯಾಮನಹಳ್ಳಿ
86.	ಚಿತ್ರದುರ್ಗ	ಚಿತ್ರದುರ್ಗ	ಗುಡ್ಡದರಂಗನಹಳ್ಳಿ
87.	ಚಿತ್ರದುರ್ಗ	ಚಿತ್ರದುರ್ಗ	ಕಲೇನಹಳ್ಳಿ
88.	ಚಿತ್ರದುರ್ಗ	ಚಿತ್ರದುರ್ಗ	ಕೋನೂರು
89.	ಚಿತ್ರದುರ್ಗ	ಚಿತ್ರದುರ್ಗ	ಚ್ಯಾಮನಹಳ್ಳಿ
90.	ಚಿತ್ರದುರ್ಗ	ಚಿತ್ರದುರ್ಗ	ಚಿಕ್ಕೇನಹಳ್ಳಿ
91.	ಚಿತ್ರದುರ್ಗ	ಚಿತ್ರದುರ್ಗ	ಪಾಲವಗೇರಿ
92.	ಚಿತ್ರದುರ್ಗ	ಚಿತ್ರದುರ್ಗ	ಸಜ್ಜನಕೇರಿ
93.	ಚಿತ್ರದುರ್ಗ	ಚಿತ್ರದುರ್ಗ	ಗೋಪರಮಲ್ಲಿಗೆ
94.	ಚಿತ್ರದುರ್ಗ	ಚಿತ್ರದುರ್ಗ	ಚೋಡ್ಡಸಿದ್ದವನಹಳ್ಳಿ
95.	ಚಿತ್ರದುರ್ಗ	ಚಿತ್ರದುರ್ಗ	ಮೇಘಲಹಳ್ಳಿ
96.	ಚಿತ್ರದುರ್ಗ	ಚಿತ್ರದುರ್ಗ	ಮಲ್ಲನಕಟ್ಟಿ
97.	ಚಿತ್ರದುರ್ಗ	ಚಿತ್ರದುರ್ಗ	ತಮ್ಮಟಕಲ್ಲೂ
98.	ಚಿತ್ರದುರ್ಗ	ಚಿತ್ರದುರ್ಗ	ಆಂಪನನಾಯಕನಕೋಟೆ
99.	ಚಿತ್ರದುರ್ಗ	ಚಿತ್ರದುರ್ಗ	ಕುರುಮಾರದಿಕೇರೆ
100.	ಚಿತ್ರದುರ್ಗ	ಚಿತ್ರದುರ್ಗ	ಒಬ್ಬವನಹಳ್ಳಿ
101.	ಚಿತ್ರದುರ್ಗ	ಹೊಳಲ್ಕೆರೆ	ಜೋಗಿರಹನುಮನಹಳ್ಳಿ
102.	ಚಿತ್ರದುರ್ಗ	ಹೊಳಲ್ಕೆರೆ	ಶನುಬೇಗನಹಳ್ಳಿ
103.	ಚಿತ್ರದುರ್ಗ	ಹೊಳಲ್ಕೆರೆ	ಮಾಕುಂಟೆ
104.	ಚಿತ್ರದುರ್ಗ	ಹೊಳಲ್ಕೆರೆ	ಕಣ್ಣೇನಹಳ್ಳಿ
105.	ಚಿತ್ರದುರ್ಗ	ಹೊಳಲ್ಕೆರೆ	ಅರಳಿಕೇರೆ
106.	ಚಿತ್ರದುರ್ಗ	ಹೊಳಲ್ಕೆರೆ	ಅಮ್ಮಲಪುರ

107.	ಚಿತ್ರದುರ್ಗ	ಹೊಸದುರ್ಗ	ವೀರಪುರಕಾವಲ್
108.	ಚಿತ್ರದುರ್ಗ	ಹೊಸದುರ್ಗ	ಲಕ್ಕಿಹಳ್ಳಿ
109.	ಚಿತ್ರದುರ್ಗ	ಹೊಸದುರ್ಗ	ಮದದಕೇರೆ
110.	ಚಿತ್ರದುರ್ಗ	ಹೊಸದುರ್ಗ	ಸೀರಿಗೇಪುರ
111.	ಚಿತ್ರದುರ್ಗ	ಹೊಸದುರ್ಗ	ಗ್ರಂಥಪುರ
112.	ಚಿತ್ರದುರ್ಗ	ಹೊಸದುರ್ಗ	ಕುದುರೇಕಣಿವೆ ಅಡವ
113.	ಚಿತ್ರದುರ್ಗ	ಹೊಸದುರ್ಗ	ಇಟ್ಟಿಗೆ ಹಳ್ಳಿ
114.	ಚಿತ್ರದುರ್ಗ	ಹೊಸದುರ್ಗ	ಕಂಚಿಪುರ
115.		ಹೊಸದುರ್ಗ	ಚಿಕ್ಕಬ್ಯಾಲಕದಕೆರೆ
116.		ಹೊಸದುರ್ಗ	ಚೋಡ್ಡಬ್ಯಾಲದಕರೆ

ಆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ

ವಿದ್ಯುದೀಕರಣಕ್ಕಾಗಿ ಬಾಕಿ ಇರುವ ಹಳ್ಳಿಗಳು (ಕಂದಾಯಗ್ರಾಮಗಳು) ಯಾವುದು ಇರುವುದಿಲ್ಲ.

ಇ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿ
117.	ಉತ್ತರ ಕನ್ನಡ	ಜೋಯಿಡ	ಅನೇರ ಹೊಗಲವಾಡಿ
118.	ಉತ್ತರ ಕನ್ನಡ	ಜೋಯಿಡ	ವಿರಾಳ
119.	ಉತ್ತರ ಕನ್ನಡ	ಜೋಯಿಡ	ಒಳೀ
120.	ಉತ್ತರ ಕನ್ನಡ	ಜೋಯಿಡ	ಬಾಝಾರಕುರಂಗೆ
121.	ಉತ್ತರ ಕನ್ನಡ	ಜೋಯಿಡ	ಆಸೋಳ್ಳಿ
122.	ಉತ್ತರ ಕನ್ನಡ	ಜೋಯಿಡ	ದಿಗಿ
123.	ಉತ್ತರ ಕನ್ನಡ	ಜೋಯಿಡ	ಗುಳಸಗೇರೆ
124.	ಉತ್ತರ ಕನ್ನಡ	ಜೋಯಿಡ	ನಿಡಗುಂದಿ
125.	ಉತ್ತರ ಕನ್ನಡ	ಜೋಯಿಡ	ಬಾಡಮೋಳಿ
126.	ಉತ್ತರ ಕನ್ನಡ	ಜೋಯಿಡ	ಉಂಗರೋಕ್ಕಾ
127.	ಉತ್ತರ ಕನ್ನಡ	ಜೋಯಿಡ	ಚೇವ್ಲೋಳ್ಳಿ
128.	ಉತ್ತರ ಕನ್ನಡ	ಜೋಯಿಡ	ಹೋವೇಶಿ

129.	ಉತ್ತರ ಕನ್ನಡ	ಜೋಯಿಡ	ಕರಣಜೋಯಿಎಲ
130.	ಉತ್ತರ ಕನ್ನಡ	ಜೋಯಿಡ	ಬಾಬೇರಿ
131.	ಉತ್ತರ ಕನ್ನಡ	ಜೋಯಿಡ	ಅಮಗಾಂವ
132.	ಉತ್ತರ ಕನ್ನಡ	ಜೋಯಿಡ	ಗೆರಾಳಿ
133.	ಉತ್ತರ ಕನ್ನಡ	ಜೋಯಿಡ	ಚೇರಿಯ
134.	ಉತ್ತರ ಕನ್ನಡ	ಜೋಯಿಡ	ಶಿವಪುರ
135.	ಬೆಳಗಾಂವ	ಖಾನಾಪುರ	ಮೇಂಡಿಲ
136.	ಬೆಳಗಾಂವ	ಖಾನಾಪುರ	ಹುಡಲೆ
137.	ಬೆಳಗಾಂವ	ಖಾನಾಪುರ	ಚೇವಗಾಂವ
138.	ಬೆಳಗಾಂವ	ಖಾನಾಪುರ	ಕಲಿಲ

ಈ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ

ವಿದ್ಯುದೀಕರಣ ಬಾಕಿ ಇರುವ ಹಳ್ಳಿಗಳು (ಕಂದಾಯ ಗ್ರಾಮಗಳು) ಇರುವುದಿಲ್ಲ.

ಉ. ಮಂಗಳೂರು ವಿದ್ಯುತ್ ಸರಬರಾಜು ಕಂಪನಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿ
139.	ಶಿವಮೊಗ್ಗ	ಶಿವಮೊಗ್ಗ	ಶೆಟ್ಟಿಹಳ್ಳಿ
140.			ಚಿತ್ರ ಶೆಟ್ಟಿಹಳ್ಳಿ
141.			ಕೆಸವಿನ ಕಟ್ಟೆ
142.			ಬೈರನಕೊಪ್ಪ
143.	ಶಿವಮೊಗ್ಗ	ಭದ್ರಾವತಿ	ಮಾರಶೆಟ್ಟಿಹಳ್ಳಿ
144.			ಬದನೆಹಳ್ಳಿ
145.			ಬಳೆಕಟ್ಟೆ
146.			ತಾರಿಕಟ್ಟೆ
147.			ನಂಜಾಪುರ
148.	ಶಿವಮೊಗ್ಗ	ತೀರ್ಥಹಳ್ಳಿ	ಬಸವನಗೋಡು
149.	ಶಿವಮೊಗ್ಗ	ಸಾಗರ	ಉರಳಗಲ್ಲು
150.	ಚಿಕ್ಕಮಗಳೂರು	ನರಸಿಂಹರಾಜಪುರ	ಹೆಬ್ಬೆ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀಜಗದೇಶ್ ಶೆಟ್ಟರ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4127ಕ್ಕೆ

ಅನುಬಂಧ – 2

ರಾಜ್ಯದಲ್ಲಿರುವ ಒಟ್ಟು ಹ್ಯಾಮ್ಲೆಟ್‌ಗಳು, ವಿದ್ಯುದೀಕರಣಗೊಂಡಿರುವ ಹಾಗೂ ವಿದ್ಯುದೀಕರಣಕ್ಕಾಗಿ ಬಾಕಿ ಇರುವ ಹ್ಯಾಮ್ಲೆಟ್‌ಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	1991ರ ಜನಗಣತಿಯಂತೆ ಇರುವ ಒಟ್ಟು ಹ್ಯಾಮ್ಲೆಟ್ ಗಳ ಸಂಖ್ಯೆ	31.3.05ರಲ್ಲಿರುವಂತೆ ವಿದ್ಯುದ್ದೀಕರಣಗೊಂಡಿರುವ ಹ್ಯಾಮ್ಲೆಟ್ ಗಳ ಸಂಖ್ಯೆ	ವಿದ್ಯುದ್ದೀಕರಣಕ್ಕಾಗಿ ಬಾಕಿ ಇರುವ ಹ್ಯಾಮ್ಲೆಟ್‌ಗಳ ಸಂಖ್ಯೆ
	ಬೆ.ವಿ.ಸ.ಕಂ.			
1	ಬೆಂಗಳೂರು ನಗರ	483	213	270
2	ಬೆಂಗಳೂರು ಗ್ರಾಮೀಣ	1563	1374	189
3	ಚಿತ್ರದುರ್ಗ	659	391	268
4	ದಾವಣಗೆರೆ	303	244	59
5	ಕೋಲಾರ	872	862	10
6	ತುಮಕೂರು	1775	1256	519
	ಒಟ್ಟು	**5,655**	**4,340**	**1,315**
	ಮ.ವಿ.ಸ.ಕಂ.			
1	ಉಡುಪಿ	2471	218	2253
2	ದಕ್ಷಿಣ ಕನ್ನಡ	2882	216	2666
3	ಶಿವಮೊಗ್ಗ	3232	1198	2034
4	ಬಿಚಿಕ್ಕಮಂಗಳೂರು	2771	723	2048
5	ಕೊಡಗು	541	101	440
	ಒಟ್ಟು	**11,897**	**2,456**	**9,441**
	ಚಾ.ವಿ.ಸ.ನಿ.			
1	ಮಂಡ್ಯ	593	468	125
2	ಮೈಸೂರು	750	483	267
3	ಚಾಮರಾಜನಗರ	425	236	189
4	ಹಾಸನ	1166	560	606
	ಒಟ್ಟು	**2,934**	**1,747**	**1,187**
	ಗು.ವಿ.ಸ.ಕಂ			
1	ಗುಲ್ಬರ್ಗಾ	655	147	508
2	ಬೀದರ್	270	142	128
3	ರಾಯಚೂರು	308	122	186
4	ಕೊಪ್ಪಳ	121	57	64
5	ಬಳ್ಳಾರಿ	459	366	93
	ಒಟ್ಟು	**1,813**	**834**	**979**

	ಹು.ವಿ.ಸ.ಕಂ.			
1	ಧಾರವಾಡ	27	36	–9
2	ಗದಗ	31	40	–9
3	ಹಾವೇರಿ	86	55	31
4	ಬಿಜಾಪುರ	249	88	161
5	ಬಾಗಲಕೋಟೆ	49	65	–16
6	ಬೆಳಗಾಂ	290	306	–16
7	ಉತ್ತರ ಕನ್ನಡ	5147	2043	3104
	ಒಟ್ಟು	**5879**	**2633**	**3246**
	ರಾಜ್ಯದ ಒಟ್ಟು	**28,178**	**12,010**	**16,168**

ಶ್ರೀ ಜಗದೀಶ್ ಶೆಟ್ಟರ್ :– ಇಲ್ಲಿ ನಾನು, ಇವತ್ತು ವಿದ್ಯುತ್ ಸಂಪರ್ಕ ವಿರುವ ಗ್ರಾಮಗಳೆಷ್ಟು? ವಿದ್ಯುತ್ ಸಂಪರ್ಕ ಇಲ್ಲದಿರುವ ಗ್ರಾಮಗಳೆಷ್ಟು? ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 2001ರ ಜನ ಗಣತಿ ಪ್ರಕಾರ ಇಡೀ ರಾಜ್ಯದಲ್ಲಿ ಒಟ್ಟು 150 ಗ್ರಾಮಗಳಲ್ಲಿ ಯಾವುದೇ ವಿದ್ಯುತ್ ಸಂಪರ್ಕವಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅವರು 2ನೇ ಉತ್ತರ ಕೊಟ್ಟಿದ್ದಾರೆ. 1991 ರ ಜನಗಣತಿ ಪ್ರಕಾರ ಒಟ್ಟು 28,178 ಉಪ ಗ್ರಾಮಗಳಿವೆ. ಅದರಲ್ಲಿ 12,010 ಉಪ ಗ್ರಾಮಗಳಿಗೆ ವಿದ್ಯುದೀಕರಣ ಮಾಡಲಾಗಿದೆ. ಇನ್ನೂ 16,168 ಉಪ ಗ್ರಾಮಗಳಿಗೆ ವಿದ್ಯುದೀಕರಣ ಆಗಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ.

ಈ ಒಂದು ಉತ್ತರವನ್ನು ನೋಡಿದರೆ ಬಹಳ ಗಾಬರಿಯಾಗುತ್ತದೆ. 16168 ಉಪಗ್ರಾಮಗಳಿಗೆ ಈ ರಾಜ್ಯದಲ್ಲಿ 28 ಸಾವಿರ ಗ್ರಾಮಗಳಲ್ಲಿ ಇವತ್ತಿನವರೆಗೂ ವಿದ್ಯುದೀಕರಣವಾಗಿಲ್ಲ ಎಂದರೆ ಅದು ಯಾವುದೇ ಸರ್ಕಾರ ಇರಲಿ ಇದು ನಾಚಿಕೆ ಬರುವಂತಹ ಸಂಗತಿ. ಇದರ ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿ ತೆಗೆದುಕೊಂಡಿದೆ, ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ, ಈ ಎಲ್ಲಾ ಗ್ರಾಮಗಳಿಗೆ ವಿದ್ಯುದೀಕರಣ ಮಾಡುವುದರ ಬಗ್ಗೆಸ್ಪಷ್ಟವಾಗಿ ಉತ್ತರ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಲಿಚ್ಛಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು) (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿರತಕ್ಕಂಥ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಮ್ಮ ವ್ಯವಸ್ಥೆಯ ದೌರ್ಬಲ್ಯಗಳಲ್ಲಿ ಇದೊಂದು. ಭಾರತ ದೇಶದಲ್ಲಿ ಶೇಕಡ 21 ರಷ್ಟು ಹಳ್ಳಿಗಳಿಗೆ ವಿದ್ಯುದೀಕರಣ ಆಗಿಲ್ಲ ಇದು ವಾಸ್ತವಾಂಶ. ಹಾಗೆಯೇ ನಾವು ಆಲ್ ಇಂಡಿಯಾ ಆ್ಯವರೇಜ್ ತೆಗೆದುಕೊಂಡಾಗ we are far superior.

ಕರ್ನಾಟಕದಲ್ಲಿ 150 ಗ್ರಾಮಗಳು, 16168 ಜನತಾ ಕಾಲೋನಿಗಳು, ತಾಂಡಾಗಳು ಎಂದು ಏನು ಕರೆಯುತ್ತೇವೆ. ಇದು ವಾಸ್ತವಾಂಶದಲ್ಲಿ 16168 ಬಸ್ತಿಗಳಿಗೆ ವಿದ್ಯುದೀಕರಣ ಆಗದೇ ಇರುವುದು ನಿಜಾಂಶ. ನಮ್ಮ ಈ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದ ಮೇಲೆ ನಮ್ಮ ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮದ ಆಧಾರದ ಮೇಲೆ, ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಎನ್ನುವ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಆ ಯೋಜನೆಯಲ್ಲಿ ಕರ್ನಾಟಕ 150 ವಿದ್ಯುದೀಕರಣ ಆಗದೇ ಇರತಕ್ಕಂಥ ಗ್ರಾಮಗಳು ಮತ್ತು 16168 ತಾಂಡಾಗಳು, ಜನತಾ ಕಾಲೋನಿಗಳು ಏನು ಇವೆ. ಇವುಗಳೆಲ್ಲವೂ ಸಹಿತ ಕನಿಷ್ಠ ಪಕ್ಷ ವಿದ್ಯುದೀಪ ಕೊಡಬೇಕು. ಎಂದು 1325 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿ ನಾವು ಒಂದು ಯೋಜನೆಯನ್ನು ತಯಾರಿಸಿದ್ದೇವೆ. ಇದರ ಪ್ರಕಾರವಾಗಿ ಬೆಂಗಳೂರಿನ ಸುತ್ತಮುತ್ತ ಸಂಬಂಧಪಟ್ಟ ಹಳ್ಳಿಗಳಿಗೆ ಬೆಸ್ಕಾಂ ಗೆ ಸಂಬಂಧಪಟ್ಟ ಹಳ್ಳಿಗಳಿಗೆ 257 ಕೋಟಿ ರೂಪಾಯಿ, ಹೆಸ್ಕಾಂ ಗೆ ಸಂಬಂಧಪಟ್ಟ ಹಾಗೆ 328 ಕೋಟಿ ರೂಪಾಯಿ, ಮೆಸ್ಕಂ ಗೆ ಸಂಬಂಧಪಟ್ಟ ಹಾಗೆ 314 ಕೋಟಿ ರೂಪಾಯಿ, ಜೆಸ್ಕಾಂ ಗೆ ಸಂಬಂಧಪಟ್ಟ ಹಾಗೆ 250 ಕೋಟಿ ರೂಪಾಯಿ, ಜಾ.ಸ.ಕಂ (ಚೆಸ್ಕಾಂಗೆ)ಸಂಬಂಧಪಟ್ಟ ಹಾಗೆ 167 ಕೋಟಿ ರೂಪಾಯಿ. ಒಟ್ಟಾರೆ 1324 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇವೆಲ್ಲಕ್ಕೂ ವಿದ್ಯುದೀಕರಣ ಕೊಡಬೇಕೆಂದು ತೀರ್ಮಾನ ಮಾಡಿ ಈ ಒಂದು ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ನಾವು ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆಯನ್ನು ಕೊಡುತ್ತಾರೆ. ನಂತರ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :– ಇಲ್ಲಿ 150 ಗ್ರಾಮಗಳಲ್ಲಿ ಮುಖ್ಯವಾಗಿ, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಇದರಲ್ಲಿ 150 ಗ್ರಾಮಗಳು ಬರುತ್ತವೆ. ಅದರಲ್ಲಿ ನಮ್ಮ ಮಾನ್ಯ ರಮೇಶ್ ಕುಮಾರ್ ರವರ ಕ್ಷೇತ್ರದಲ್ಲಿ 120 ಗ್ರಾಮಗಳು, ಚಿಕ್ಕನಾಯಕನಹಳ್ಳಿಯ 10 ಗ್ರಾಮಗಳು, ಅಂದರೆ ಆ ಗ್ರಾಮಗಳಿಗೆ ವಿದ್ಯುತ್ತಿನ ಸಂಪರ್ಕವೇ ಇಲ್ಲ. ಇಂಥ ಪರಿಸ್ಥಿತಿ ಇದೆ ಹೀಗಿರುವಾಗ ಎಲ್ಲಾ ಗ್ರಾಮಗಳಿಗೆ ತಕ್ಷಣವೇ ವಿದ್ಯುದ್ದೀಕರಣವಾಗುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು. ಅದಕ್ಕೆ ಕಾಲಮಿತಿಯನ್ನು ನಿಗದಿಗೊಳಿಸಬೇಕು. ನಾವು ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಲ್ಲಿ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದರು. ಎಷ್ಟೇಷ್ಟು ಹಣವನ್ನು ಯಾವ್ಯಾವ ಬೆಸ್ಕಾಂಗಳಿಗೆ ನಿಗದಿ ಮಾಡಿದ್ದೇವೆ ಎನ್ನುವುದನ್ನೂ ಹೇಳಿದರು. ಅದರ ಜೊತೆಗೆ 16168 ಹ್ಯಾಮ್ಲೆಟ್ಸ್ ಏನು ಇವೆ, ಇಲ್ಲಿಯೇ ಬಹಳಷ್ಟು ಜನ ದಲಿತರು, ಹಿಂದುಳಿದವರು, ಬಡವರು, ಇದ್ದಾರೆ. ಇಂಥ ಜನರ ವೋಟುಗಳ ಮೇಲೆ ಬಂದಂಥ ಸರ್ಕಾರ 16168 ತಾಂಡಾಗಳಿಗೆ ಕಳೆದ 50 ವರ್ಷಗಳಿಂದ ವಿದ್ಯುತ್ ಕೊಟ್ಟಿಲ್ಲವೆಂದರೆ ಬಹುಶಃ ಇದರಷ್ಟು ನಾಚಿಕೆಗೇಡಿನ ವಿಷಯ ಇನ್ನೊಂದಿಲ್ಲ. ಹೀಗಾಗಿ ಇದಕ್ಕೆ ಒಂದು ಕಾಲಮಿತಿ ಹಾಕಿ ಅದರ ಪ್ರಕಾರ ನೀವು ಈ ಒಂದು ಯೋಜನೆಯನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾದಾಗ ಮಾತ್ರ ಕರ್ನಾಟಕದ ಅರ್ಧ ಭಾಗ....

ಅಧ್ಯಕ್ಷರು :– ನೀವು ಈಗ ಪ್ರಶ್ನೆ ಕೇಳುತ್ತಿದ್ದೀರೋ ಅಥವಾ ಅವರಿಗೆ ಪಾಠ ಹೇಳುತ್ತಿದ್ದೀರೋ ?

ಶ್ರೀ ಜಗದೀಶ್ ಶೆಟ್ಟರ್ :– ಅದಕ್ಕಾಗಿ ಇವರೊಂದು ಕಾಲಮಿತಿ ಹಾಕಿ ಈ ಒದು ಯೋಜನೆಯನ್ನು ಮುಗಿಸಬೇಕು. ಇನ್ನೊಂದು ಕುಟೀರ ಜ್ಯೋತಿ ಯೋಜನೆಯನ್ನು ತೆಗೆದುಕೊಂಡು ಬಂದಿರಿ, ಎಲ್ಲಿ ಬಡವರು ಇದ್ದಾರೆ ಆಶ್ರಯ ಕಾಲೋನಿಗಳು ಏನು ಇವೆ ಅಲ್ಲಿ ಈ ಕುಟೀರ ಜ್ಯೋತಿ ಯೋಜನೆಯನ್ನು ಹಿಂದಿನ ಸರ್ಕಾರ ತಂದಿತ್ತು ಆದರೆ ಅದನ್ನು ನೀವು ನಿಲ್ಲಿಸಿದಿರಿ. ಹಾಗಾದರೆ ಕುಟೀರ ಜ್ಯೋತಿಗೆ ಪರ್ಯಾಯವಾದ ಬೇರೆ ಯಾವ ಯೋಜನೆ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ನಮ್ಮೆಲ್ಲರ ಅನುಭವದಲ್ಲಿ ಹೇಳುವುದಾದರೆ, ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನ

ಎಲ್ಲಿದ್ದಾರೆ ಆ ಹಳ್ಳಿಗಳು ಅಭಿವೃದ್ಧಿಯಾದ ನಂತರ ಹೆಚ್ಚು ಮನೆಗಳನ್ನು ಬೇರೆ ಬೇರೆ ಮೊಹಲ್ಲಾದಲ್ಲಿ ಕಟ್ಟಿದಾಗ ಇದುವರೆಗೂ ಆ ವಿದ್ಯುತ್‌ನ್ನು ವಿಸ್ತರಣೆ ಮಾಡುವಂಥ ಕೆಲಸ ಎಲ್ಲಿಯೂ ಆಗಿಲ್ಲ. ಪ್ರತಿ ಕ್ಷೇತ್ರದಲ್ಲೂ ಇದು ನಮ್ಮ ಅನುಭವಕ್ಕೆ ಬಂದಿದೆ. ಒಂದು ಹರಿಜನ ಬಸ್ತಿಯಲ್ಲಿ ವಿದ್ಯುತ್ ಇದೆ ಪಕ್ಕದಲ್ಲಿ ಏನು ವಿಸ್ತರಣೆ ಆಗಿದೆ ಅಲ್ಲಿ ವಿದ್ಯುತ್ ಇಲ್ಲ. ಇದರ ಬಗ್ಗೆ ನಾವು ಏನಾದರೂ ಕೇಳಿದರೆ ಸರ್ಕಾರದಲ್ಲಿ ಇದಕ್ಕೆ ಯಾವುದೇ ಕಾರ್ಯಕ್ರಮವಿಲ್ಲವೆಂದು ಹೇಳುತ್ತಾರೆ. ಆದಕ್ಕೆ ಇದನ್ನು ಆಧ್ಯತೆಯ ಮೂಲಕ, ಕೆಪಿಬಿಸಿಎಲ್ ಮೂಲಕ ಮತ್ತು ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ ಯಾವುದೇ ಇರಬಹುದು ಅದರ ಮೂಲಕ ಬೆಳಕನ್ನು ಕೊಡುವ ಕಡೆಗೆ ಏನಾದರೂ ಕಾರ್ಯಕ್ರಮ ನಿರೂಪಿಸಬಹುದಾ ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:– ನಾನು ಈಗಾಗಲೇ ಹೇಳಿದ ಹಾಗೆ, ರಾಜೀವಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಲ್ಲಿ ಇದಕ್ಕೆ ಎಲ್ಲಾ ಹಳ್ಳಿ ಮತ್ತು ತಾಂಡಾಗಳನ್ನು ಗುರುತಿಸಿ ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಮಂಜೂರಾತಿ ಸಿಗುತ್ತದೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥದ್ದು ಸತ್ಯಾಂಶದ ವಿಚಾರ. ಏಕೆಂದರೆ, ನಾವು ಅವರಿಗೆ ರಾತ್ರಿ ಹೊತ್ತು ಬದುಕುವುದಕ್ಕೆ ಕರೆಂಟ್ ಕೊಡಲಿಲ್ಲವೆಂದರೆ, ಅದು ತಪ್ಪಾಗುತ್ತದೆ. ಅದರಲ್ಲೂ ವಿಶೇಷವಾಗಿ ದುರ್ಬಲವರ್ಗದವರಿಗೆ, ಬಡವರು ಇರತಕ್ಕಂಥ ಬಸ್ತಿಗಳಿಗೆ ಆದಷ್ಟು ಆದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸುಮಾರು 1500 ಕೋಟಿ ರೂಪಾಯಿ ಬೇಕಾಗಿರುವುದರಿಂದ ಇದನ್ನು ಒಂದೇ ವರ್ಷದಲ್ಲಿ ಮಾಡಲಿಕ್ಕೆ ಆಗುತ್ತದೆಂದು ನಾನು ಹೇಳಲಿಕ್ಕೆ ಆಗುವುದಿಲ್ಲ. ಅದು ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ ಅವರು ನಮಗೆ ಸಹಕಾರ ಕೊಡುತ್ತಿರುವುದರಿಂದಾಗಿ ಆದಷ್ಟು ಬೇಗ ಇದಕ್ಕೆ ಮಂಜೂರಾತಿಯನ್ನು ಪಡೆದ ನಂತರ ಆದ್ಯತೆಯ ಮೇರೆಗೆ ಕೆಲಸ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :– ಕುಟೀರ ಜ್ಯೋತಿ ಬಗ್ಗೆ ಏನೂ ಹೇಳಲೇ ಇಲ್ಲ ಅದು ಕೂಡ ಬಡವರಿಗೆ ಇರುವಂಥದ್ದು.